816 ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪ್ರದೇಶವನ್ನು ಕೇಂದ್ರ ಸರ್ಕಾರವು ಹುಲಿ ಸಂರಕ್ಷಣಾ ಪ್ರದೇಶವನ್ನಾಗಿ ಮಾರ್ಪಡಿಸಲು ಯೋಜನೆ ರೂಪಿಸುತ್ತಿರುವುದಾಗಿ ವರದಿಯಾಗಿದ್ದು ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರದಿಂದ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು);

ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು) :

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಕುದುರೆಮುಖ ಹುಲಿ ಸಂರಕ್ಷಣೆ ಎಂದು ಘೋಷಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಕುದುರೆಮುಖ ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಿರುವ ಸಂಬಂಧ ಕೇಂದ್ರ ಸರ್ಕಾರ ಅನುಮೋದಿಸಿದೆ ಹಾಗೂ ಈ ಬಗ್ಗೆ ಇನ್ನೂ ಕ್ರಮ ಕೈಗೊಂಡಿರುವುದಿಲ್ಲ.

ಅರಣ್ಯ ಬೆಂಕಿಗೆ ಆಹುತಿ

621 (815) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11 ಮತ್ತು 2011–12ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಎಕರೆ ಅರಣ್ಯ ಬೆಂಕಿಗೆ ಆಹುತಿಯಾಗಿದೆ;

ಆ) ಬೆಂಕಿಯನ್ನು ನಂದಿಸಲು ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು);

ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು) :

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ವಿವಿಧ ಅರಣ್ಯ ಪ್ರದೇಶಗಳಲ್ಲಿ ನೆಲ ಬೆಂಕಿ ಬಿದ್ದಿದ್ದು, ಸದರಿ ಬೆಂಕಿಯಿಂದ ಸಣ್ಣ ಪೊದೆಗಳು, ಒಣಗಿ ಉದುರಿದ ಎಲೆಗಳು ಮಾತ್ರ ಸುಟ್ಟಿದ್ದು, ಯಾವುದೇ ಮರಗಳಿಗೆ ಮತ್ತು ವನ್ಯ ಪ್ರಾಣಿಗಳಿಗೆ ಹಾನಿಯಾಗಿರುವುದು ವರದಿಯಾಗಿರುವುದಿಲ್ಲ. ಇಂತಹ ನೆಲ ಬೆಂಕಿ ಸಂಭವಿಸಿದ ಪ್ರದೇಶಗಳ ವಿವರಗಳು ಕೆಳಕಂಡಂತಿವೆ;